


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ಸಂಶೋಧನೆ, ರಾಜಕಾರಣ, ಸರ್ವಾಧಿಕಾರ ದರ್ಶನ

2

ಹದಿಹರೆಯದ ಲೋಹಿಯಾರಲ್ಲಿ ಸಿನಿಮಾ ಮೋಹ ಅರಳುತ್ತಿದ್ದ ಕಾಲದಲ್ಲಿ ಜನಪ್ರಿಯ ಹಾಲಿವುಡ್ ನಟಿ ಗ್ರೇಟಾ ಗಾರ್ಬೊ ಅವರಿಗೆ ಪ್ರಿಯವಾದ ನಟಿಯಾಗಿದ್ದಳು. ಅದೇ ಆಗ ಸಿನಿಮಾಲೋಕಕ್ಕೆ ಅಡಿಯಿಟ್ಟಿದ್ದ ಗ್ರೇಟಾ ಗಾರ್ಬೊಳ 'ಟೊರೆಂಟ್', 'ದ ಟೆಂಪ್ಟ್ರೆಸ್', 'ಫ್ಲೆಶ್ ಅಂಡ್ ದಿ ಡೆವಿಲ್' ಸಿನಿಮಾಗಳು ಬಂದಿದ್ದವು; ಆಕೆಯ ಮುಗ್ಧ ಮೋಹಕ ಮುಖ, ಸಹಜ ನಟನೆ ಹದಿಹರೆಯದ ಲೋಹಿಯಾರನ್ನು ಸೆಳೆದಿದ್ದು ಅಚ್ಚರಿಯಲ್ಲ. ವಿದ್ಯಾರ್ಥಿ ದೆಸೆಯ ನಂತರ ಕೂಡ ಗ್ರೇಟಾ ಅವರ ನೆಚ್ಚಿನ ನಟಿಯಾಗಿ ಉಳಿದಂತಿದೆ. ಕಲ್ಕತ್ತಾದ ವಿದ್ಯಾರ್ಥಿ ದೆಸೆ ಮುಗಿದ ದಶಕಗಳ ನಂತರ, ಸಮಾಜವಾದಿ ಚಿಂತಕ–ರಾಜಕಾರಣಿ ಲೋಹಿಯಾ ಅಮೆರಿಕಕ್ಕೆ ಹೋದಾಗ ಗ್ರೇಟಾ ಗಾರ್ಬೊಳನ್ನು ನೋಡಲು ಹಾಲಿವುಡ್‌ಗೂ ಹೋದರು! ಆದರೆ ಗ್ರೇಟಾ ಬೇರಾವುದೋ ಊರಿಗೆ ಹೋಗಿದ್ದಳು! ಗ್ರೇಟಾ ಗಾರ್ಬೊ ಒಳ್ಳೆಯ ನಟಿ, ಸುಂದರಿ ಎಂಬ ಕಾರಣಕ್ಕಷ್ಟೇ ಅಲ್ಲದೆ, ಆಕೆಯೊಬ್ಬ ಸ್ವತಂತ್ರ ಮನೋಭಾವದ ಹೆಣ್ಣು ಎಂಬ ಕಾರಣಕ್ಕೂ ಮುಂದೆ ಚಿಂತಕ ಲೋಹಿಯಾ ಅವಳನ್ನು ಇಷ್ಟಪಡುತ್ತಿದ್ದರು.

ಇಸವಿ 1928. ಲೋಹಿಯಾ ಅಖಿಲ ಭಾರತ

